O.S. ನಂಬರಃ 45/2017

ಪಿ. ಡಬ್ಲ್ಯೂ 3

ದಿಃ 29-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ</u>

ಸಾಕ್ಷಿ ಹೇಳಲು ವಾದಿಯರು ಕರೆಸಿರುತ್ತಾರೆ. ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2.45 ರವರೆಗೆ ನನ್ನ ಕಾಲೇಜಿನ ಅವಧಿ ಇರುತ್ತದೆ. 22-ವರ್ಷಗಳಿಂದ ನಾನು ಬೋಧನಾ ವೃತ್ತಿ ಮಾಡುತ್ತಿದ್ದೇನೆ. ಕಾಲೇಜಿನ ಅವಧಿ ಮುಗಿದ ನಂತರ ಮರುದಿವಸದ ಅಭ್ಯಾಸಕ್ಕೆ ತಯಾರಿ ನಡೆಸಬೇಕೆಂದರೆ ಸರಿ. ನಮ್ಮ ಮನೆ ಹಾಗೂ ವಾದಿಯರ ಆಸ್ತಿ ನಡುವೆ ರಸ್ತೆಗುಂಟ ಸಾಕಷ್ಟು ರೈತರ ಜಮೀನಿರುತ್ತವೆ ಎಂದರೆ ಸರಿ. ರಸ್ತೆಗುಂಟ ಇರುವ ಎಲ್ಲ ರೈತರ ಜಮೀನುಗಳಲ್ಲಿ ಯಾರು ಯಾರು ಕಬ್ಜೆಯಲ್ಲಿರುತ್ತಾರೆಂದು ಪರಿಶೀಲಿಸುವ ಅಗತ್ಯತೆ ಇರುವುದಿಲ್ಲ ಎಂದರೆ ಸರಿ. ವಾದಿಯರ ಜಮೀನು ಸಧ್ಯ 2 ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಭೂಮಿಯನ್ನು ಕಳೆದುಕೊಂಡಿದ್ದೇವೆ ಎಂದು ವಾದಿಯರು ಹೇಳಿದ್ದಕ್ಕೆ ಮಾಹಿತಿ ಇದೆ ಎಂದು ಹೇಳುತ್ತಾರೆ. ಕಾಗದ ಪತ್ರಗಳಿಗೆ ಸಹಿ ಮಾಡುವ ಪೂರ್ವದಲ್ಲಿ ವಾದಿಯರು ಯಾವತ್ತೂ ನನ್ನ ಅಭಿಪ್ರಾಯ ಕೇಳಿಲ್ಲ, ಆದರೆ ಈ ಪ್ರಕರಣಕ್ಕೆ ಸಾಕ್ಷಿ ಹೇಳಲು ಮಾತ್ರ ಕರೆದಿರುತ್ತಾರೆಂದು ಹೇಳುತ್ತಾರೆ.

ಅಂದಾಜು 10-ವರ್ಷಗಳಿಂದ 2 ನೇ ವಾದಿ ಮನೆ ಹತ್ತಿರ ಗ್ರಾಮ ಚಾವಡಿ ಇದೆ ಎಂದರೆ ಸರಿ. 2 ನೇ ವಾದಿಗೆ ಗ್ರಾಮ ಚಾವಡಿ ಅಧಿಕಾರಿಗಳ ಪರಿಚಯ ಇದೆ ಎಂದರೆ ಮಾಹಿತಿ ಇಲ್ಲ. ಗ್ರಾಮ ಚಾವಡಿಯಲ್ಲಿಯ ಅಧಿಕಾರಿಗಳ ಪರಿಚಯ ಇದೆ ಎಂದರೆ ನಾನು ಜೋಯಿಡಾದಲ್ಲಿ ಕೆಲಸ ಮಾಡುತ್ತಿದ್ದರಿಂದ ಬೆಳಿಗ್ಗೆ ಹೋದರೆ ಪುನಃ ಮನೆಗೆ ಬರುವುದು ರಾತ್ರಿ ಆಗುತ್ತದೆ ಎಂದು ಹೇಳುತ್ತಾರೆ. ವಾರದಲ್ಲಿ 5 ದಿನ ನಾನು ಕಾಲೇಜಿಗೆ ಹೋಗುತ್ತೇನೆ. ಖಾಸಗಿ ಕಾಲೇಜು ಇರುವುದರಿಂದ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡುತ್ತೇನೆ ಎಂದು ಹೇಳುತ್ತಾರೆ.

ದಾವಾ ಆಸ್ತಿಗಳಲ್ಲಿ ಹೋದ ಮಳೆಗಾಲದಲ್ಲಿ ಭತ್ತ ಬೆಳೆದಿದ್ದನ್ನು ಹಾಗೂ ಸ್ವಲ್ಪ ಭಾಗದಲ್ಲಿ ತರಕಾರಿ ಬೆಳೆದಿದ್ದನ್ನು ನೋಡಿದ್ದೇನೆ. ಭತ್ತವನ್ನು ಪ್ರತಿವಾದಿಯರು ಬೆಳೆದಿದ್ದಾರೆ ಎಂದರೆ ಸರಿಯಲ್ಲ. ಚೌತಿ ಸಮಯದಲ್ಲಿ ಗಾಂವಕರ ರವರ ಮನೆಗೆ ಹೋದಾಗ ಭತ್ತ ವಾದಿಯರು ಕೊಯ್ಲು ಮಾಡುವುದನ್ನು ನೋಡಿದ್ದೇನೆ ಎಂದು ಹೇಳುತ್ತಾರೆ. ವಾದಿಯರು ನನಗೆ ಅತ್ಯಂತ ಪರಿಚಯದ ಜನ ಎಂದರೆ ತಂದೆಯ ಕಾಲದಿಂದಲೂ ಪರಿಚಯ ಇರುತ್ತಾರೆಂದು ಹೇಳುತ್ತಾರೆ. ಈ ದಿನ ನಾನು ಹಾಗೂ ಪಿ.ಡಬ್ಲ್ಯೂ-2 ರವರು ಒಂದೇ ಮೋಟಾರ ಸೈಕಲ ಮೇಲೆ ಬಂದಿದ್ದೇವೆ ಎಂದರೆ ಸರಿ. ವಾದಿಯರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

(2 ನೇ ಪ್ರತಿವಾದಿ ಪರ ವಕೀಲರು, 1 ನೇ ಪ್ರತಿವಾದಿ ಪರ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದು, ಅನುಮತಿಸಲಾಯಿತು.)

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.